Doc.-89
T-P-2

Regd No B. 155 26-11-1969

SATYAVADI Daily, MYSORE 4 ★ 53 rd Year of Publication

ಶ್ರೀ ಸತ್ಯನಾರಾಯಣ
ಬೆನಿಫಿಟ್ ಸ್ಕೀಂ
(ಚಾಮುಂಡೇಶ್ವರಿ ಟಾಕೀಸ್ ಕಟ್ಟಡ)
203, ಸಯ್ಯಾಜಿರಾವ್ ರಸ್ತೆ,
ಮೈಸೂರು-1
ಮೇಲ್ಕಂಡ ಯೋಜನೆಗೆ
ಇಂದೇ ಚಂದಾದಾರರಾಗಿರಿ
ಅದರ ಫಲವನ್ನು ಪಡೆಯಿರಿ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಅಮೇರಿಕಾ ಕ್ರಿಮಿ ನಮರ ಮಾಡುವುದಿಲ್ಲ

ಪಾಕಿಸ್ತಾನವಿಂದ ಬರಬೇಕಾದದ್ದು

ನವದೆಹಲಿ— ಪಾಕಿಸ್ತಾನವು ಭಾರತಕ್ಕೆ ಟೆಲಿಗ್ರಾಫ್ ಆದಾಯ ರೂ 24 ಲಕ್ಷ ಮತ್ತು ಟೆಲಿಫೋನ್ ಆದಾಯ ರೂ 41 ಲಕ್ಷ ಕೊಡಬೇಕಾಗಿದೆಯೆಂದು ಪ್ರಕಟವಾಗಿದೆ.

○

ಮತದಾನದ ವಯಸ್ಸು

ನವದೆಹಲಿ— ಪಾಕಿಸ್ತಾನದಲ್ಲಿ ಮತದಾನದ ವಯಸ್ಸನ್ನು 21 ವರ್ಷದಿಂದ 18 ಕ್ಕೆ ಇಳಿಸಬೇಕೆಂಬ ಕೋರಿಕೆ ಜನಪ್ರಿಯವಾಗಿದೆ.

○

ವಿಶ್ವ ಬ್ಯಾಂಕು ನೆರವು

ನವದೆಹಲಿ— ಆಂಧ್ರದಲ್ಲಿಯ ಮೂರು ನೀರಾವರಿ ಪ್ರಾಜೆಕ್ಟುಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಯನ್ನು ವಿಶ್ವಬ್ಯಾಂಕು ಪರ್ಯಾಲೋಚಿಸುತ್ತಿದೆ.

★

ಆಗಲೇ ಅತೃಪ್ತಿ ಪ್ರಾರಂಭ

ನವದೆಹಲಿ— ಪ್ರಧಾನಿಯವರ ಕಾಂಗ್ರೆಸ್ಸಿನ ಹೊಸ ಕಾರ್ಯಕಾರಿ ಸಮಿತಿಯ ರಚನೆಯ ಬಗ್ಗೆ ಅತೃಪ್ತಿಯುಂಟಾಗಿದೆ — ಒರಿಸ್ಸಾ, ಬಿಹಾರು, ಮಧ್ಯಪ್ರದೇಶ, ಮಹಾರಾಷ್ಟ್ರ ಗುಂಪಿನಲ್ಲಿ ಹೀಗಾಗಿದ್ದು, ಸುಮಾರು 25 ಮಂದಿ ಪಾರ್ಲಿಮೆಂಟು ಸದಸ್ಯರು ಸಭೆ ನಡೆಸಿ ತಮ್ಮ ಮನೋಭಾವನವನ್ನು ಪ್ರಧಾನಿಯವರಿಗೆ ತಿಳಿಸಿದುದಾಗಿ

○

ನವದೆಹಲಿ— ಪ್ರಧಾನಿಯವರ ಕಾಂಗ್ರೆಸ್ ಉಪಾಧ್ಯಕ್ಷ ಶ್ರೀ ಸುಬ್ರಹ್ಮಣ್ಯಂರವರು 5 ಸದಸ್ಯರ ಪಾರ್ಲಿಮೆಂಟರಿ ಜೋಡಣೆಯನ್ನು ರಚಿಸಿದರು.

ಕ್ರಿಮಿ ಆಯುಧ ಯುದ್ಧ

ವಾಷಿಂಗ್ಟನ್— ಅಮೇರಿಕವು ತನ್ನಲ್ಲಿರುವ ಕ್ರಿಮಿ ಶಸ್ತ್ರಾಸ್ತ್ರಗಳನ್ನು ನಾಶಮಾಡುವುದೆಂದೂ, ಯುದ್ಧದಲ್ಲಿ ಶತ್ರುಗಳು ಕ್ರಿಮಿ ಆಯುಧಗಳನ್ನು ಉಪಯೋಗಿಸಿದರೂ ತಾವು ಉಪಯೋಗಿಸುವುದಿಲ್ಲವೆಂದೂ ಅಧ್ಯಕ್ಷ ನಿಕ್ಸನ್ನರು ಹೇಳಿದರು.

ನಗ್ನ ನೃತ್ಯ ನಿಲ್ಲಿಸಿ

ತ್ರಿವೇಂದ್ರಂ— ಪೌರಸಭೆಯು ಏರ್ಪಡಿಸಿದ್ದ ವಸ್ತುಪ್ರದರ್ಶನದಲ್ಲಿ ಸೋಮವಾರ ರಾತ್ರಿ ಸಂಪೂರ್ಣ ಬೆತ್ತಲೆಯ ಇಬ್ಬರು ಹುಡುಗಿಯರ ನೃತ್ಯ ಏರ್ಪಡಿಸಲಾಗಿತ್ತೆಂದೂ, ಪೋಲೀಸರು ಇದನ್ನು ತಪ್ಪಿಸಲು ಹೋದಾಗ ಉದ್ರಿಕ್ತ ಗುಂಪಿಗೂ ಅವರಿಗೂ ಘರ್ಷಣೆಯೊಗಲು ಪೋಲೀಸರು ಲಾಠಿ ಛಾರ್ಜು ಮಾಡಿ ಚದುರಿಸಿದರೆಂದೂ, ಆ ನಗ್ನ ನೃತ್ಯ ತಾರೆಯರನ್ನು ಬಂಧಿಸಿದರೆಂದೂ ವರದಿಯಾಗಿದೆ.

ಶಿಶು ಚಿಕಿತ್ಸಾ ಶಿಕ್ಷಾಕ್ಷೆ

ನವದೆಹಲಿ— ಏಷ್ಯಾ ಪ್ರದೇಶದಲ್ಲೇ ಪ್ರಪ್ರಥಮವಾಗಿ ನಾಲ್ಕು ವಾರಗಳ ಅವಧಿಯ ಶಿಶು ಚಿಕಿತ್ಸಾ ಶಿಕ್ಷಾಕ್ಷೆಯನ್ನು ಪ್ರಾರಂಭಿಸಲಾಯಿತು ; ವಿಶ್ವ ಆರೋಗ್ಯ ಸಂಸ್ಥೆಯು ಇದನ್ನು ವ್ಯವಸ್ಥೆಗೊಳಿಸಿದೆ ; ಭಾರತ ಮತ್ತು ಇತರ ಏಷ್ಯಾ ದೇಶಗಳ 20 ದಾದಿಯರು ಹಾಗೂ 10 ವೈದ್ಯರು ತರಬೇತಿ ಪಡೆಯುತ್ತಿದ್ದಾರೆ.

★

ಹೊಡೆದಾಟದಲ್ಲಿ ಒಬ್ಬನ ಸಾವು

ನಾಗಪುರ— ಸಿಪಿಐ ಮತ್ತು ಎಸ್ಸೆಸ್ಪಿ ರಾಜಕೀಯ ಪಕ್ಷಗಳ ಬೆಂಬಲಿಗರಲ್ಲಿ ಹೊಡೆದಾಟನಾಗಿ ಒಬ್ಬ ಸತ್ತನು — ಪೋಲೀಸರು ಪರಿಸ್ಥಿತಿಯನ್ನು ಹತೋಟಿಗೆ ತಂದು 5 ಮಂದಿಯನ್ನು ಬಂಧಿಸಿದರು.

○

ಅಂಚೆ ಮತ್ತು ತಂತಿ ಇಲಾಖೆ

ನವದೆಹಲಿ— ದೇಶದಲ್ಲಿ ರೈಲ್ವೇ ಇಲಾಖೆ ಖಿಟ್ಟರಿ ಅಂಚೆ ಮತ್ತು ತಂತಿ ಇಲಾಖೆಯೇ ಅತಿ ದೊಡ್ಡದು — 1968 ರ ಮಾರ್ಚ್ 31 ರಲ್ಲಿ ಈ ಇಲಾಖೆಯಲ್ಲಿ ಸುಮಾರು 524947 ಮಂದಿ ನೌಕರರಿದ್ದರು : ಇದರಲ್ಲಿ 3434 ಗೆಜಿಟೆಡ್ ಅಧಿಕಾರಿಗಳೂ 16267 ಮಂದಿ ಮಹಿಳಾ ನೌಕರರೂ ಸೇರಿದ್ದಾರೆ.

★

ಮುಷ್ಕರ

ಕೊಚ್ಚಿ— ಕೇರಳ ಎಲೆಕ್ಟ್ರಿಸಿಟಿ ಬೋರ್ಡಿನ 5000 ನೌಕರರು ಹೆಚ್ಚಿಗೆ ಸಂಬಳ ಮುಂತಾದ ಕೋರಿಕೆ ಒತ್ತಾಯಕ್ಕೆ ಅನಿರ್ದಿಷ್ಟ ಕಾಲ ಮುಷ್ಕರ ಹೂಡಿರುವರು.

○

ಭೂಸುಧಾರಣೆ

ನವದೆಹಲಿ— ಭೂಸುಧಾರಣೆ ಕಾರ್ಯಕ್ರಮದ ಪ್ರಗತಿ, ಕಾನೂನಿನ ನ್ಯೂನತೆಗಳು ಹಾಗೂ ಭೂ ಸುಧಾರಣೆ ಅನುಷ್ಠಾನಕ್ಕೆ ತರಲು ಬೇಕಾಗುವ ಆಡಳಿತ ಯಂತ್ರ ಕುರಿತು ವಿವಿಧ ರಾಜ್ಯಗಳ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಮಂತ್ರಿ ಮಂತ್ರಿಗಳು ತಾ|| 28–29 ರಂದು ಇಲ್ಲಿ ಚರ್ಚಿಸುವರು.

ದೆಹಲಿಯಲ್ಲಿ ರಾಜ್ಯೋತ್ಸವ

ನವದೆಹಲಿ— ಇಲ್ಲಿ ನಡೆದ ಕನ್ನಡ ರಾಜ್ಯೋತ್ಸವದಲ್ಲಿ 4000 ಕನ್ನಡಿಗರು ಭಾಗವಹಿಸಿದ್ದರು.

★

ಸ್ಪಿರಿಟ್ ವಶ

ಬಾಗಲಕೋಟೆ— ಹೈದರಾಬಾದಿನಿಂದ ಬರುತ್ತಿದ್ದ ಒಂದು ಟ್ರಕ್‌ನಿಂದ 600 ಲೀಟರು ರೆಕ್ಟಿಫೈಡ್ ಸ್ಪಿರಿಟ್ಟನ್ನೂ, ಆ ಟ್ರಕ್ಕನ್ನೂ ವಶಪಡಿಸಿಕೊಂಡು ಮೂರು ಮಂದಿಯನ್ನು ಬಂಧಿಸಲಾಯಿತು.

★

ಅಮಿತ ಸಂತೋಷ

ಸ್ಪೇಸ್ ಸೆಂಟರ್ (ಹೌಸ್ಟನ್)— ಆಪೊಲೊ 12 ರ ಗಗನಯಾತ್ರಿಗಳು ವಾಪಸ್ಸಾದ ಸಂತೋಷಾರ್ಥವಾಗಿ ಆವರ ಸಂಸಾರದವರು ಬಾಣಬಿರುಸು, ಮದ್ದುಪಾನ ಜಯಘೋಷ, ಸಂಗೀತದಿಂದ ಆನಂದಪಟ್ಟರು.

★

ಕಮ್ಯೂನಿಸ್ಟು ದೃಷ್ಟಿಕೋಣ

ಕಲ್ಕತ್ತಾ— ಪ್ರಧಾನಿ ನೇತೃತ್ವದ ಕಾಂಗ್ರೆಸ್ ಜನತಾ ಹಿತ ಸಾಧಿಸಲಾರದೆಂದು ಪಶ್ಚಿಮ ಬಂಗಾಳಾ ಮುಖ್ಯ ಮಂತ್ರಿ ಶ್ರೀ ಅಜ್ಯಾ ಘೋಷ್ ಹೇಳಿದರು — ಪಶ್ಚಿಮ ಬಂಗಾಳಾದಂತೆ ಸಂಯುಕ್ತ ರಂಗ ಮಾಡುವುದು ಹೆಚ್ಚು ಪ್ರಯೋಜನಕಾರಿ ಎಂದೂ ಹೇಳಿದರು.

★

4 ನೇ ಯೋಜನೆ

ಬೆಂಗಳೂರು— 4 ನೇ ಯೋಜನೆಗೆ ರಾಜ್ಯ ಸರಕಾರ-ರೂ 350 ಕೋಟಿ ಕೇಳಿದ್ದರೂ, ಪ್ಲಾನಿಂಗ್ ಕಮಿಷನ್ ರೂ 327 ಕೋಟಿ ನಿಗದಿ ಮಾಡಿದೆ

"Bank Road Bahusar – A Fair Price Shop in Actual Practice"

ತಂದೆ--ಮಗ

ಸ್ವಲ್ಪ ಕಾಲದ ಹಿಂದೆ ನಡೆದ ವಿಚಾರವಿದು. ಕಲ್ಕತ್ತಾದ ಭಾರಿ ವ್ಯಾಪಾರ ಸಂಸ್ಥೆಯ ಒಂದು ಇಲಾಖೆಯ ಮುಖ್ಯಸ್ಥನ ನಿಸೇತೇ ಪ್ರಸಸ್ತಿ ಪಡೆದಿದ್ದ ಒಬ್ಬ ಬಂಗಾಳಿ ಇಂಜಿನಿಯರಾಗಿದ್ದನು, ಮತ್ತು ಉತ್ತಮ ಜಾತಿಗೆ ಸೇರಿದವನಾಗಿದ್ದನು. ಆತನಿಗೆ ಒಂದು ಮಧ್ಯಾಹ್ನಕ್ಕೆ ಸ್ವಲ್ಪ ಮುಂಚೆ ಒಂದು ಟೆಲಿಫೋನ್ ಕರೆ ಬಂತು : ಅದು ವ್ಯಾಪಾರ-ಸಂಬಂಧದ್ದಲ್ಲ ; ಆತನ ಮನೆಯಿಂದ ಬಂದ ಕರೆ ; ಆತನ ತಂದೆ ಸಿದ್ಧರಾದರೆಂದೂ, ಕೂಡಲೇ ಬರಬೇಕೆಂದೂ ತಿಳಿಸಲಾಗಿತ್ತು. ಈತನು ತಂದೆಯ ಹಿರಿಯ ಮಗ, ಮತ್ತು ಈತನು ಶವಸಂಸ್ಕಾರ ನಿರ್ವಹಿಸಿ ಅಂತ್ಯ ಸಂಸ್ಕಾರ ನಡೆಸಬೇಕಾಗಿತ್ತು. ಈ ವಾರ್ತೆ ಬಂದಾಗ ಈತನ ಬ್ಲಲಗೈ ಬೆರಳುಗಳ ಮಧ್ಯೆ ಸಿಗರೇಟು ಇತ್ತು ; ಎಡಗೈನಲ್ಲಿ ಟೆಲಿಫೋನ್ ಹಿಡಿದಿದ್ದನು. ಒರಟಾಗಿ ಈ ರೀತಿ ಉತ್ತರ ಕೊಟ್ಟನು– ' ಈಗ ನಾನು ಬಹಳ ಕೆಲಸದಲ್ಲಿದ್ದೇನೆ : ಆಫೀಸು ಬಿಟ್ಟು ಬರಲು ಸಾಧ್ಯವಿಲ್ಲ ; ನೀವೇ ಶವಸಂಸ್ಕಾರ ಏರ್ಪಡಿಸಿ : ನಾನು ರಾತ್ರಿ ಕ್ಲಬ್ಬಿಗೆ ಭೇಟಿ ಕೊಡಬೇಕು ಎಂದಿಗಿಂತ ಮುಂಚೆ ಬರುತ್ತೇನೆ '.

ಈ ಉತ್ತರ ಕೇಳಿದ ಆತನ ಪರ್ಸನಲ್ ಅಸಿಸ್ಟೆಂಟಿಗೆ ಡಂಗುಬಡಿದಂತಾಯಿತು. ಇಂತಹ ಮಗನನ್ನು ಆತನು ಎಂದೂ ಕಂಡಿರಲಿಲ್ಲ. ಆತನು ತಿಳಿಸಿದ್ದ ಈ ವಿಷಯವನ್ನು ಆತನ ಸಂಬಂಧೀಕರೊಬ್ಬರು ಪ್ರಕಟಿಸಿದ್ದಾರೆ. (ಟ್ರೂತ್‌ನಿಂದ ಅನುವಾದ)

ಮನನಾರ್ಹ ವಿಷಯ

ಸ್ವಾನುಭವವಿಲ್ಲದವನು ಪರಾನುಭವವನ್ನು ಪುರಸ್ಕರಿಸುವುದುಂಟು ; ಸ್ವಾನುಭವವುಳ್ಳವನು ಪರಾನುಭವವನ್ನು ತಿರಸ್ಕರಿಸಿಬಿಡುತ್ತಾನೆ.

ವುಡ್‌ಲಾಂಡ್ ಜಯಪ್ರದ 2ನೇ ವಾರ
ಶಿನ ಅನೋಖೆ ಪ್ರಾರಂಭ
— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮೆನ್ ಕಲರ್ —
ಹಮ್‌ಸಾಯ
ಪಾತ್ರ : ಮಾಲಾಸಿನ್ಹಾ, ಜಾಯ್ ಮುಖರ್ಜಿ, ಶರ್ಮಿಳಾ ಟಾಗೂರ್
ಸಂಗೀತ : ಓ. ಪಿ. ನಯ್ಯರ್
[ದಿನ 3 ಪ್ರದರ್ಶನಗಳು]

ಆಪೇರಾ 21-11-69 ರಿಂದ
.... ಅತ್ಯಮೋಘ ತಮಿಳು ಚಿತ್ರ ....
ದೈವಮಗನ್
ಪಾತ್ರ ; ಶಿವಾಜಿ ಗಣೇಶ್, ನಾಗೇಶ್, ಜಯಲಲಿತ
ದಿನ 3 ಆಟಗಳು

SHAKTI
SUDHA
A Superb Tonic

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ
Protectthe Cow

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ-ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-0)
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ದೇಶದ ಹಿತಕ್ಕಾಗಿ
ಕುಟುಂಬ ಯೋಜನೆ

ಅಖಿಲ ಭಾರತದಲಿ ಕೂಡಲೇ
ಗೋವಧೆ ನಿಷೇಧವಾಗಲಿ

Quality Printing — Neat Binding
Lakshminarasimha Press
Sivarampet, Mysore

Edited, Printed & Published by Dharmaprachara Nirata
M S Krishna Rao (Proprietor) at the Satyavadi Press
Chamarajapura, Mysore 4